ಆ) ಈ ಪೈಕಿ ವಿಫಲವಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು? ಹಾಗೂ ಎಷ್ಟು ಕೊಳವೆಬಾವಿಗಳಿಗೆ ಕೈಪಂಪನ್ನು ಅಳವಡಿಸಲಾಗಿದೆ?

ಇ) ಕೈಪಂಪನ್ನು ಅಳವಡಿಸಲಾಗಿರುವ ಕೊಳವೆ ಬಾವಿಗಳ ವಿಫಲವಾಗಿದ್ದಲ್ಲಿ ಅವುಗಳಿಗೆ ಅಳವಡಿಸಿದ್ದ ಜಿ. ಐ. ಪೆಪು, ಕೇಸಿಂಗ್ ಪೈಪುಗಳನ್ನು ಹರಾಜು ಹಾಕಲಾಗಿದೆಯೇ?

ಈ) ಈ ಹರಾಜಿನಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) 1497

ಆ) ಇವುಗಳಲ್ಲಿ 168 ಕೊಳವೆಬಾವಿಗಳು ವಿಫಲವಾಗಿವೆ. 1329 ಕೊಳವೆಬಾವಿಗಳಿಗೆ ಕೈಪಂಪನ್ನು ಅಳವಡಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಬೈಲಹೊಂಗಲ ತಾಲ್ಲೂಕಿಗೆ ರಾಜೀವಗಾಂಧಿ ಯೋಜನೆಯಲ್ಲಿ ಕುಡಿಯುವ ನೀರಿನ ಯೋಜನೆ.

2747 (3428) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯಿತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲಾ ಬೈಲಹೊಂಗಲ ತಾಲ್ಲೂಕಿನ 19 ಗ್ರಾಮಗಳಿಗೆ ಕುಡಿಯುವ ನೀರಿನ ಸಲುವಾಗಿ ರಾಜೀವ್ ಗಾಂಧಿ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ಎಂದು ಆಡಳಿತಾತ್ಮಕ ಮಂಜೂರಾತಿ ನೀಡಿದೆ ಮತ್ತು ಎಷ್ಟು ಮೊತ್ತಕ್ಕೆ ನೀಡಿತು ಹಾಗೂ ಈ ಕೆಲಸಕ್ಕೆ ತಾಂತ್ರಿಕ ಮಂಜೂರಾತಿ ಎಂದು ನೀಡಲಾಗಿದೆ.

ಆ) ಈ ಯೋಜನೆಯಿಂದ ಯಾವ ಯಾವ ಹಳ್ಳಿಗಳಿಗೆ ಪ್ರಯೋಜನ ಆಗುವುದು (ಹಳ್ಳಿಗಳ ಹೆಸರು ಕೊಡಿ)

ಇ) ಈ ಯೋಜನೆಗೆ ತಗಲುವ ವೆಚ್ಚ ಎಷ್ಟು; ಇದರಲ್ಲಿ ಸರ್ಕಾರ ಎಷ್ಟು ಹಣ ಭರಿಸ ಬೇಕಾಗುವುದುಹಾಗೂ ಎಷ್ಟು ಹಣ ಕೇಂದ್ರ ಸರ್ಕಾರ ಭರಿಸುವುದು;

ಈ) ಕೇಂದ್ರ ಸರ್ಕಾರ ಈ ಯೋಜನೆಗೆ ಎಷ್ಟು ಹಣ ಈಗಾಗಲೇ ಬಿಡುಗಡೆ ಮಾಡಿದೆ ಲಕ್ಷಗಳು ಬಿಡುಗಡೆಯಾಗಿದೆ.

ಉ) ಈ ಕೆಲಸಕ್ಕೆ ಕೇಂದ್ರ ಸರ್ಕಾರವದರು ಆಡಳಿತಾತ್ಮಕ ಮಂಜೂರಾತಿ ನೀಡಿರುವುದರಿಂದ ಹಾಗೂ ಹಣ ಬಿಡುಗಡೆ ಮಾಡಿರುವುದರಿಂದ ಇನ್ನೂವರೆಗೂ ಈ ಕೆಲಸ ಪ್ರಾರಂಭವಾಗಿಲ್ಲ ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಈ ಯೋಜನೆಯ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಕೇಂದ್ರ ಸರ್ಕಾರವು ದಿನಾಂಕ : 1-8-97 ರಲ್ಲಿ ರೂ. 920.51 ಲಕ್ಷ ಮೊತ್ತದ ಈ ಯೋಜನೆಗೆ ಅನುಮೋದನೆ ನೀಡಿದ್ದು, ದಿ: 5-8-98ರಲ್ಲಿ ರಾಜ್ಯ ಸರ್ಕಾರ ಆಡಳಿತಾತ್ಮಕ ಮಂಜೂರಾತಿ ನೀಡಿದೆ ಈ ಯೋಜನೆಗೆ ಪ್ರಧಾನ ಇಂಜಿನಿಯರ್‌ರು ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ಇಲಾಖೆ ಇವರು ದಿ: 31-8-98ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿದ್ದಾರೆ.

ಆ) ಈ ಯೋಜನೆಯಿಂದ ಪ್ರಯೋಜನ ಪಡೆಯುವ ಹಳ್ಳಿಗಳು : (1) ಅಮಟೂರು (2) ನಯಾನಗರ (3) ಬೈಲವಾಡ (4) ಚಿವಟಗುಂಡಿ (5) ಲಕ್ಕುಂಡಿ (6) ಮ್ಯಾಕಲಮರಡಿ (7) ಮಲ್ಲಾಪುರ (ಕೆ.ಎನ್) (8) ಮದನಬಾವಿ (9) ನೇಸರಗಿ (10) ನಾಗನೂರು (11) ಸೋಮನಟ್ಟಿ (12) ವಣ್ಣೂರು (13) ಯರಗುಡ್ಡಿ (14) ಅನಿಗೋಲ (15) ವಕ್ಕುಂಡ್ (16) ಬೇವಿನಕೊಪ್ಪ (17) ಕೊರವಿನಕೊಪ್ಪ (18) ಮಶ್ತಿ ಕೋಪ್ಪ (19) ಮುರ್ಕಿಭಾವಿ ಮತ್ತು (20) ದೇವಲಾಪುರ.

ಇ) ರೂ. 920.15 ಲಕ್ಷಗಳು. ಕೇಂದ್ರದ ಪಾಲು ಶೇಕಡ 75 ರಾಜ್ಯದ ಪಾಲು ಶೇಕಡ 25.

ಈ) 1998-99ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದಿಂದ ರೂ. 345.19 ಹಾಗೂ ಎಂದು ಬಿಡುಗಡೆ ಮಾಡಿದೆ;

ಉ) ಈ ಯೋಜನೆಯ ಕಾಮಗಾರಿ ಪ್ರಾರಂಭಿಸುವಲ್ಲಿ ಕೆಳಕಂಡ ಕಾರಣಗಳಿಂದ ವಿಳಂಬವಾಗಿರುತ್ತದೆ;

1. ಯೋಜನೆಯ ಅಂದಾಜು ರೂ. 100 ಕೋಟಿಗಿಂತ ಜಾಸ್ತಿಯಿರುವುದರಿಂದ ಟರ್ನ್‌ಕೀ ಟೆಂಡರ್ ಆಧಾರದ ಪ್ರಕ್ರಿಯೆ.

2. 11ನೇ ವಿಧಾನಸಭಾ ಚುನಾವಣೆ ಪ್ರಯುಕ್ತ ಟೆಂಡರ್ ಪ್ರಕ್ರಿಯೆಯನ್ನು 2 ತಿಂಗಳು ಮುಂದೂಡಲಾಗಿತ್ತು.

3. ಮೇಲ್ಬಟ್ಟ ಜಲಸಂಗ್ರಹಾಲಯ ಕಟ್ಟಲು ಬೇಕಾದ ಸ್ಥಳದ ಭೂಸ್ವಾಧೀನ.

ಊ) ಈ ಯೋಜನೆಯ ಕೆಲಸವನ್ನು ಅರ್ಹ ಗುತ್ತಿಗೆದಾರರಿಗೆ ಆದ್ಯತೆ ಮೇಲೆ ವಹಿಸಿ ಕಾಮಗಾರಿಯನ್ನು ಆರಂಭಿಸಲಾಗುವುದು.

ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ವಿಭಾಗ ವಿಷಯಗಳನ್ನು ಅನುದಾನಕ್ಕೆ ಒಳಪಡಿಸುವ ವಿಚಾರ.

2748 (3291) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಅರೆಕಾಲಿಕ ಶಿಕ್ಷಕರುಗಳ ಸಂಖ್ಯೆ ಎಷ್ಟು ಇವರನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದ ನಿಲುವುಗಳೇನು;

ಆ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವ್ಯವಸ್ಥೆಯಲ್ಲಿ ಯೋಗ ಶಿಕ್ಷಣದ ಬಗ್ಗೆ (ಸಿಲೆಬಸ್) ಸೇರಿಸುವ ಪ್ರಸ್ತಾವನೆ ಸರ್ಕಾರದಮುಂದಿದೆಯೆ : ಇದ್ದಲ್ಲಿ ಆ ಕುರಿತು ವಿವರಗಳೇನು :